## ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 166 ಮುಅಬಿ 2001

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 24/12/2001.

## ಸು ತ್ತೋ ಲೆ

ವಿಷಯ:- ಆರಾಧನಾ ಯೋಜನೆಯಡಿ ಮಂಜೂರಾಗಿರುವ ಅನುದಾನದ ಮೇಲೆ ಸಂಗ್ರಹವಾಗಿರುವ ಬಡ್ಡಿ ಹಣವನ್ನು ಆರಾಧನಾ ಕಾಮಗಾರಿಗಳಿಗೆ ಉಪಯೋಗಿಸಿಕೊಳ್ಳಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ:- 1. ಸರ್ಕಾರದ ಆದೇಶ ಸಂಖ್ಯೆ: ಕಂಇ 104 ಮುಇವಿ 95 ದಿನಾಂಕ: 08/01/1997.
2. ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆರವರ ಪತ್ರ ಸಂಖ್ಯೆ: ಡಿವಿಎಸ್/(ಬಿ)/ಸಿಆರ್/213/96-97 ದಿನಾಂಕ:5/11/2001.

* * * * * * * * *

ಆರಾಧನಾ ಯೋಜನೆಯಡಿ ಮಂಜೂರಾಗಿರುವ ಅನುದಾನದ ಮೇಲೆ ಸಂಗ್ರಹವಾಗಿರುವ ಬಡ್ಡಿ ಹಣವನ್ನು ಆರಾಧನಾ ಕಾಮಗಾರಿಗಳಿಗೆ ಉಪಯೋಗಿಸಿಕೊಳ್ಳಲು ಅನುಮತಿ ನೀಡುವ ಬಗ್ಗೆ ಮೇಲೆ ಉಲ್ಲೇಖಿತ ಪತ್ರ (2)ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಲಂಬಾಣಿತಾಂಡ ಹಾಗೂ ಇತರೇ ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದ ಜನರು ವಾಸಿಸುವ ಸ್ಥಳಗಳಲ್ಲಿ ದೇವಾಲಯ ಪೂಜಾ ಮಂದಿರ ಹಾಗೂ ಪ್ರಾರ್ಥನಾ ಮಂದಿರಗಳ ರಿಪೇರಿ ಜೀರ್ಣೋದ್ಧಾರ ಮತ್ತು ನವನಿರ್ಮಾಣವನ್ನು ಮಾಡಲು ಸರ್ಕಾರವು ಆರಾಧನಾ ಯೋಜನೆಯನ್ನು ಜಾರಿಗೆ ತಂದಿದ್ದು, ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಸಲುವಾಗಿ ಉಲ್ಲೇಖ (1)ರಲ್ಲಿ ಸರ್ಕಾರವು ಪರಿಷ್ಕೃತ ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ.

ಸದರಿ ಮಾರ್ಗಸೂಚಿಯನ್ನು ಮುಂದುವರಿಸುತ್ತಾ, ಸರ್ಕಾರವು ಈ ಯೋಜನೆಯಡಿ ಪ್ರತಿ ವರ್ಷವು ಅನುದಾನವನ್ನು ವಿಧಾನ ಸಭಾ ಕ್ಷೇತ್ರವಾರು ಹಂಚಿಕೆ ಮಾಡುತ್ತಿದ್ದು, ಸರ್ಕಾರದ ಮಾರ್ಗಸೂಚಿಯಂತೆ ನವನಿರ್ಮಾಣಗಳಿಗೆ ರೂ.1.00 ಲಕ್ಷ ಗರಿಷ್ಠ ಅನುದಾನ ಮಂಜೂರು ಮಾಡಲು ಅವಕಾಶವಿದ್ದರೂ ಜಿಲ್ಲೆಗಳಿಗೆ ನೀಡುತ್ತಿರುವ ಅನುದಾನ ಮೊತ್ತವು ಸೀಮಿತವಾಗಿರುವುದರಿಂದ ನವನಿರ್ಮಾಣಗಳಿಗೆ ಗರಿಷ್ಠ ಅನುದಾನ

.....2/-

ಮಂಜೂರು ಮಾಡಲು ಅಕಾಶವಾಗುತ್ತಿಲ್ಲ. ಇದರಿಂದಾಗಿ ಆರಾಧನಾ ಯೋಜನೆಯಡಿ ಕೈಗೊ ನವನಿರ್ಮಾಣ ಕಾಮಗಾರಿಗಳಿಗೆ ಗರಿಷ್ಠ ಮೊತ್ತವನ್ನು ನೀಡಲು ಅವಕಾಶವಾಗದೆ ಹಲವಾರು ಕಾಮಗಾರಿ. ಪೂರ್ಣಗೊಳಿಸಲಾಗದೆ ದೇವಾಲಯದ ಆಡಳಿತ ಮಂಡಳಿಯವರು, ಆರಾಧನಾ ಸಮಿತಿಯವರು ಹೆಚ್ಚಿನ ಅನುದಾನ ಕೋರಿಕೆಗೆ ಮನವಿ ಸಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ನವನಿರ್ಮಾಣದ ಕಾಮಗಾರಿಗಳನ್ನು ಪೂರ್ಣಗೊಳಿಸುವ ಸಲುವಾಗಿ ಸರ್ಕಾರವು ಪ್ರತಿ ವರ್ಷವು ಬಿಡುಗಡೆ ಮಾಡುತ್ತಿರುವ ಅನುದಾನದ ಮೇಲೆ ಸಂಗ್ರಹವಾಗಿರುವ ಬಡ್ಡಿ ಹಣವು ಅನುಪಯುಕ್ತವಾಗಿ ಉಳಿದಿದ್ದ ಈ ಬಡ್ಡಿ ಹಣವನ್ನು ಆರಾಧನಾ ಯೋಜನೆಯಡಿ ಕೈಗೊಳ್ಳುವ ನವನಿರ್ಮಾಣ ಪ್ರಕರಣಗಳಿಗೆ ಮತ್ತು ಅರ್ಧಕ್ಕೆ ನಿಂತು ಹೋಗಿರುವ ಅರ್ಹ ಪ್ರಕರಣಗಳಿಗೆ ಆರಾಧನಾ ಯೋಜನೆಯಡಿಯಲ್ಲಿ ಬರುವ ಮಾರ್ಗಸೂಚಿಯಂತೆ ಆಯಾ ವಿಧಾನಾ ಸಭಾ ಕ್ಷೇತ್ರದಲ್ಲಿ ಉಪಯೋಗಿಸಿಕೊಳ್ಳಲು ಅನುಮತಿ ನೀಡಲಾಗಿದೆ.

24/12/01

(ಬಿ.ಎಂ. ಸಣ್ಣಲಿಂಗಣ್ಣನವರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಮುಜರಾಯಿ)

24/12

ಗೆ:-

1) ವಿಭಾಗಾಧಿಕಾರಿಗಳಿಗೆ.
2) ಧಾರ್ಮಿಕ ದತ್ತಿ ಆಯುಕ್ತರು, ಚಾಮರಾಜಪೇಟೆ, ಬೆಂಗಳೂರು.
3) ಎಲ್ಲಾ ಜಿಲ್ಲಾಧಿಕಾರಿಗಳು.
4) ನಿಯಂತ್ರಕರು, ರಾಜ್ಯ ಲೆಕ್ಕ ಪತ್ರ ಇಲಾಖೆ, ಬೆಂಗಳೂರು.
5) ಮಾನ್ಯ ಮುಜರಾಯಿ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು.
6) ಎಲ್ಲಾ ತಹಶೀಲ್ದಾರ್‌ಗಳಿಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಮುಖೇನ.
7) ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಮಾ

ನಂ: ಆವಿಎಸ್(1)ಸಿಆರ್: 205 : 2001-02

ಜಿಲ್ಲಾಧಿಕಾರಿಗಳ ಕಛೇರಿ,
ಹಾಸನಜಿಲ್ಲೆ-ಹಾಸನ
ದಿನಾಂಕ: 19-1-2002.

ಸರ್ಕಾರದ ಸುತ್ತೋಲೆಯನ್ನು ಅಗತ್ಯ ಕ್ರಮಕ್ಕಾಗಿ ಜಿಲ್ಲೆಯ ಎಲ್ಲಾ ತಹಶೀಲ್ದಾರರವರಿಗೆ ಕಳುಹಿಸಿದೆ.

ಜಿಲ್ಲಾಧಿಕಾರಿಯವರ ಪರವಾಗಿ,
ಹಾಸನಜಿಲ್ಲೆ-ಹಾಸನ.

ಆವಿಎಸ್:189:2001-02
ತಹಸೀಲ್ದಾರ್, ಹಾಸನ, ಅರಸೀಕೆರೆ, ಚನ್ನರಾಯಪಟ್ಟಣ ಮತ್ತು ಹೊಳೆನರಸೀಪುರರವರಿಗೆ ಅಗತ್ಯ ಕ್ರಮಕ್ಕಾಗಿ ರವಾನಿಸಿದೆ.

ಉಪವಿಭಾಗಾಧಿಕಾರಿಗಳು,
ಹಾಸನ ಉಪವಿಭಾಗ, ಹಾಸನ.

8/3/2

110 29